# ದಿವಾಣಿ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯ, ನವಲಗುಂದ.

## ಸಿ. ಸಿ. ನಂಃ 122/2024

ಪಿ.ಡಬ್ಲ್ಯೂ- 1
ಸಿ.ಡಬ್ಲ್ಯೂ- 4

| | | |
|---|---|---|
| ಹೆಸರು | ಃ- | ಶ್ರೀಮತಿ ಚಂದ್ರಮ್ಮ ಹೆಬ್ಬಾಳ |
| ತಂದೆ / ಗಂಡನ ಹೆಸರು | ಃ- | ಕುಮಾರಡ್ಡಿ |
| ವಯಾ | ಃ- | 70 ವರ್ಷ |
| ಉದ್ಯೋಗ | ಃ- | ಗೃಹಿಣಿ |
| ವಾಸಸ್ಥಳ | ಃ- | ಬ್ಯಾಳಾಳ |
| ಸತ್ಯ ಪ್ರತಿಜ್ಞೆ ಮೇರೆಗೆ | ಃ- | ದಿನಾಂಕಃ 17-11-2025 |

***ಮುಖ್ಯ ವಿಚಾರಣೆ ಃ- ಶ್ರೀ ಸ.ಸ.ಅ. ರವರಿಂದ ಃ***

1) ಪ್ರಕರಣದ ಆರೋಪಿತರ ಪರಿಚಯವಿದೆ ನನ್ನ ಸಂಬಂಧಿಕರು ಆಗಬೇಕು. ಚಾಸಾ-1 ನನ್ನ ಗಂಡನಾಗಬೇಕು. ಚಾಸಾ-5 ರಿಂದ ಚಾಸಾ-7 ರವರ ಪರಿಚಯವಿದೆ.

2) ನನಗೆ ಇಬ್ಬರು ಹೆಣ್ಣುಮಕ್ಕಳು ಇದ್ದು ಗಂಡು ಮಕ್ಕಳು ಇರುವುದಿಲ್ಲ. ಹೆಣ್ಣುಮಕ್ಕಳ ವಿವಾಹವಾಗಿರುತ್ತದೆ. ಹಿರಿಯ ಮಗಳ ಗಂಡನು ಆಕೆಗೆ ತೊಂದರೆ ನೀಡುತ್ತಾ ಬಂದಿರುತ್ತಾನೆ. ಚಾಸಾ-1 ರವರು ತಮ್ಮ ದೂರವಾಣಿ ಸಂಖ್ಯೆಗಳ ಡೈರಿಯನ್ನು ಕಳೆದುಕೊಂಡಿದ್ದು 1 ನೇ ಆರೋಪಿತಳನ್ನು ಕೇಳಲಾಗಿ 3 ನೇ ಆರೋಪಿತನು ಚಾಸಾ-1 ರವರಿಗೆ ಕೈಯಿಂದ ಎದೆಗೆ ಗುದ್ದಿರುತ್ತಾನೆ. ಮತ್ತೆ ಕೈಗೆ ಹಾಗೂ ಬೆನ್ನಿಗೆ ಹೊಡೆದಿರುತ್ತಾನೆ.

3) ನಂತರ ಚಾಸಾ-1 ರವರಿಗೆ ನವಲಗುಂದದ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಆನಂತರ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**(ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಅನುಮತಿ ಕೊರಿದ್ದು ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ –</u>**

1) ದಿನಾಂಕ 02-11-2023 ರ ಸಂಜೆ 04-00 ಗಂಟೆ ಸುಮಾರಿಗೆ ಚಾಸಾ-1 ರವರು ತಮ್ಮ ಡೈರಿಯನ್ನು ಕಳೆದುಕೊಂಡಿದ್ದು ಆಗ 1 ನೇ ಆರೋಪಿತಳನ್ನು ಕೇಳಲಾಗಿ ಸದರಿಯವರು ನನ್ನ ಬಲಗೈಯನ್ನು ಹಿಡಿದು ನನ್ನನ್ನು ಏನು ಕಳ್ಳಿ ಎಂದು ತಿಳಿದುಕೊಂಡಿದಿಯಾ ಎಂದು ಹೇಳಿ ನೆಲಕ್ಕೆ ತಳ್ಳಿರುತ್ತಾರೆ ಎಂದರೆ ಸರಿ. ನಂತರ ನನಗೆ 1 ನೇ ಆರೋಪಿತಳು ಹಿತ್ತಲ ಬಾಗಿಲ ಬಳಿ ಇದ್ದ ಇಟ್ಟಂಗಿಯಿಂದ ನನ್ನ ಬಲಗೈ ಮುಂಗೈಗೆ ಹೊಡೆದಿರುತ್ತಾರೆ ಎಂದರೆ ಸರಿ.

2) ಆನಂತರ ಚಾಸಾ-1 ರವರು ಜಗಳ ತಪ್ಪಿಸಲು ಬಂದಾಗ ಆರೋಪಿತರೆಲ್ಲರೂ ಆತನನ್ನು ಸಹ ಹೊಡೆದು ಆತನ ಕೈಬೆರಳು ಕಿತ್ತಿದ ಹಾಗೆ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. 3 ನೇ ಆರೋಪಿತನು ಚಾಸಾ-1 ರವರ ಎದೆಗೆ ಕಾಲಿನಿಂದ ಒದ್ದು ಅಲ್ಲದೇ ತಲೆಗೆ ಸಹ ಹೊಡೆದಿರುತ್ತಾನೆ ಎಂದರೆ ಸರಿ. 2 ನೇ ಆರೋಪಿತನು ಚಾಸಾ-1 ರವರ ಕತ್ತನ್ನು ಹಿಡಿದು ಹೊರಗೆ ದೂಡಿ ಹಾದರಿಗಿತ್ತಿ ಮಗನ ಹೊರಗೆ ಹೋಗಲೆ ಎಂದು ಅವಾಚ್ಯ ಶಬ್ದದಿಂದ ನಿಂದನೆ ಮಾಡಿರುತ್ತಾನೆ ಎಂದರೆ ಸರಿ.

3) ನಂತರ ಚಾಸಾ-5 ಮತ್ತು ಚಾಸಾ-6 ರವರು ಜಗಳ ಬಿಡಿಸಿರುತ್ತಾರೆ ಎಂದರೆ ಸರಿ. ಆನಂತರ ನಾನು ಹಾಗೂ ಚಾಸಾ-1 ರವರು ನವಲಗುಂದ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿ. ಆನಂತರ ಚಾಸಾ-1 ರವರು ದೂರು ನೀಡಿರುತ್ತಾರೆ ಎಂದರೆ ಸರಿ.

*<u>ಪಾಟೀಸವಾಲು ಆರೋಪಿ ಪರ ಃ ಶ್ರೀ ವಿ ಪಿ ಪಿ ವಕೀಲರಿಂದ ಃ -</u>*

1) 1 ನೇ ಆರೋಪಿತಳು ನನ್ನ ಹಿರಿಯ ಮಗಳು, 2 ನೇ ಆರೋಪಿತನು ನನ್ನ ಅಳಿಯ ಹಾಗೂ 3 ನೇ ಆರೋಪಿತನು ನನ್ನ ಮೊಮ್ಮಗ ಎಂದರೆ ಸರಿ. ಚಾಸಾ-1 ರವರು ಒಂದು ವರ್ಷದ ಹಿಂದೆ ಮರಣ ಹೊಂದಿರುತ್ತಾರೆ. 1 ನೇ ಆರೋಪಿತಳು ಆಸ್ತಿಯಲ್ಲಿ ಹಿಸ್ಸೆ ಕೋರಿ ಮಾನ್ಯ ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 185/2022 ದಾಖಲು ಮಾಡಿ ಅದು ಇಲ್ಲಿಯವರೆಗೆ ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ. ಚಾಸಾ-1 ರವರು ಸಹೋದರಿಯು ಸಹ ಹಿಸ್ಸೆ ಬೇಕು ಎಂದು ಅಸಲು ದಾವಾ ಸಂಖ್ಯೆ 232/2022 ದಾವೆ ಸಲ್ಲಿಸಿದ್ದು ಇನ್ನೂ ಚಾಲ್ತಿಯಲ್ಲಿ ಇದೆ ಎಂದರೆ ಸರಿ.

2) ನನ್ನ ಹಾಗೂ ಚಾಸಾ-1 ರವರ ಊಟದ ವ್ಯವಸ್ಥೆ ಹಾಗೂ ಪಾಲನೇ ಪೋಷಣೆ 1 ನೇ ಆರೋಪಿತಳು ಮಾಡುತ್ತಿದ್ದರು ಎಂದರೆ ಸರಿ. ನನ್ನ ಹಾಗೂ ಚಾಸಾ-1 ರವರ ನಿರ್ವಹಣೆಯನ್ನು ಹಾಗೂ ನಮ್ಮ ಆಸ್ತಿಯ ನಿರ್ವಹಣೆಯನ್ನು 2 ನೇ ಆರೋಪಿತನು ತನ್ನ ಹೊಲವನ್ನು ಮಾರಾಟ ಮಾಡಿ ಮಾಡಿರುತ್ತಾರೆ ಎಂದರೆ ಸರಿ. 2 ನೇ ಮಗಳನ್ನು ಸಾಸವಿಹಳ್ಳಿ ಗ್ರಾಮಕ್ಕೆ ವಿವಾಹ ಮಾಡಿ ಕೊಟ್ಟಿರುತ್ತೇವೆ. ಅವಳು ಅಲ್ಲಿಯೆ ತನ್ನ ಗಂಡನ ಸಂಗಡ ವಾಸವಿರುತ್ತಾರೆ ಎಂದರೆ ಸರಿ.

3) ಘಟನೆಯ ದಿನಾಂಕ ಹಾಗೂ ಸಮಯ ಹೇಳಲು ಬರುವುದಿಲ್ಲ. ಚಾಸಾ-1 ರವರ ಡೈರಿ ಕಳೆದು ಹೋದ ದಿನಾಂಕ ಹಾಗೂ ಸಮಯ ನಿಖರವಾಗಿ ಹೇಳಲು ಬರುವುದಿಲ್ಲ. ನಾನು ಹಾಗೂ ಆರೋಪಿತರು ಪ್ರತ್ಯಕವಾಗಿ ವಾಸ ಮಾಡುತ್ತೇವೆ ಎಂದರೆ ಸರಿ. ಊರಿನ ಹಿರಿಯರು ಮಕ್ಕಳ ಹಿಸ್ಸೆಯನ್ನು ಕೊಟ್ಟು ಬಿಡಲು ನನಗೆ ತಿಳಿಸಿರುತ್ತಾರೆ ಎಂದರೆ ಸರಿ.

4) ನನಗೆ ಪೆಟ್ಟು ಬಿದ್ದಿರುತ್ತದೆ ಎಂದು ಹೇಳಲಾದ ಸಮಯದಲ್ಲಿ ಆಸ್ಪತ್ರೆಗೆ ಹೋಗಿರುವುದಿಲ್ಲ ಕಾರಣ ಪೆಟ್ಟಾಗಿರುವುದಿಲ್ಲ. ಚಾಸಾ-1 ರವರು ಯಾವ ಆಸ್ಪತ್ರೆಗೆ ಹೋಗಿರುತ್ತಾರೆ ಎಂದು ಹೇಳಲು ಬರುವುದಿಲ್ಲ ಕಾರಣ ನಾನು ಹೋಗಿರುವುದಿಲ್ಲ. ನಾನು ಆಸ್ಪತ್ರೆಗೆ ಹೋದ ಬಗ್ಗೆ ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿತರೆಲ್ಲರೂ ಹೊಡಿ ಬಡಿ ಮಾಡಿದ ಬಗ್ಗೆ, ಅವಾಚ್ಯ ಶಬ್ದದಿಂದ ನಿಂದನೆ ಮಾಡಿದ ಬಗ್ಗೆ ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಚಾಸಾ-5 ಮತ್ತು ಚಾಸಾ-6 ರವರು ಜಗಳ ಬಿಡಿಸಿದ ಬಗ್ಗೆ ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ಚಾಸಾ-1 ರವರಿಗೆ ಮಾಹಿತಿ ಇತ್ತು. ನನಗೆ ಗೊತ್ತಿಲ್ಲ.

5) ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ ಚಾಸಾ-1 ರವರು ನೀಡಿರುತ್ತಾರೆ. 1 ನೇ ಆರೋಪಿತಳು ಪಾಲು ಕೇಳಿ ದಾವಾ ಸಲ್ಲಿಸಿದ್ದು ಹಾಗೂ ಅವಳಿಗೆ ಪಾಲು ನೀಡಬಾರದು ಮತ್ತು ದಾವೆಗೆ ಅನುಕೂಲವಾಗಲೆಂದು ನಾನು ಮತ್ತು ಚಾಸಾ-1 ರವರು ಸೇರಿ ಸುಳ್ಳು ದೂರನ್ನು ನೀಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಚಾಸಾ-7 ರವರು ನನಗೆ ಹಣಕಾಸಿನ ಸಹಾಯ ಮಾಡುತ್ತಾರೆ ಎಂದರೆ ಸರಿ. ಯಾವುದೇ ಘಟನೆ ನಡೆಯದೇ ಇದ್ದರು

ಆರೋಪಿತರಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಪ್ರಕರಣ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲಾ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)

**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**

**ನವಲಗುಂದ.**